# ಬ್ರಹ್ಮಜ್ಞಾನಿ ಯಾಜ್ಞವಲ್ಕ್ಯರು


**ಮಂಡಗದ್ದೆ ಪ್ರಕಾಶ ಬಾಬು ಕೆ.ಆರ್**

ಸನಾತನ ಧರ್ಮವನ್ನು ಬೆಳಗಿದ ಪ್ರಾಚೀನ ಋಷಿಗಳ ಸಾಲಿನಲ್ಲಿ ಎದ್ದು ನಿಲ್ಲುವವರು ಯಾಜ್ಞವಲ್ಕ್ಯರು. ಅತಿಶ್ರೇಷ್ಠವಾದ ತತ್ತ್ವವನ್ನು ಪ್ರತಿಪಾದಿಸಿದವರೂ, ಅಷ್ಟೇ ಉಜ್ಜ್ವಲವಾದ ಬದುಕನ್ನು ಜಗತ್ತಿಗೆ ತೋರಿಸಿಕೊಟ್ಟವರೂ ಆದ ಈ ಮಹಾತ್ಮರ ಪರಿಚಯವನ್ನು ಇಲ್ಲಿ ಮಾಡಲಾಗಿದೆ. ಲೇಖಕರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರು; ಅಧ್ಯಾತ್ಮ ಸಾಧನೆ, ಅಧ್ಯಯನ, ಸೇವೆ ಮುಂತಾದ ಕಾರ್ಯಗಳಲ್ಲಿ ನಿರತರಾಗಿರುವ ಅವರು ಹಲವು ಗ್ರಂಥಗಳನ್ನು ರಚಿಸಿದ್ದಾರೆ. ಹಲವು ಪತ್ರಿಕೆಗಳಲ್ಲಿ ಅವರ ಅನೇಕ ಲೇಖನಗಳು ಕೂಡ ಪ್ರಕಟವಾಗಿವೆ.

ಉಜ್ವಲ ಸೂರ್ಯನಂತೆ ಪ್ರಕಾಶಿಸುತ್ತಿದ್ದ ಏಕೈಕ ಋಷಿವರ್ಯರೆಂದರೆ ಮಹರ್ಷಿ ಯಾಜ್ಞವಲ್ಕ್ಯರು. ಇವರು ದೇವರಾತ ಮತ್ತು ಸುನಂದಾದೇವಿಯವರ ನಿರಂತರ ತಪಸ್ಸಿನ ಫಲದಿಂದ ಜನಿಸಿದವರು. ಯಾಜ್ಞವಲ್ಕ್ಯರ ಸೋದರಮಾವನೇ ಆಗಿದ್ದ ಶ್ರೀವೈಶಂಪಾಯನರ ಬಳಿ ಅವರು ಕೃಷ್ಣಯಜುರ್ವೇದವನ್ನು ಅಧ್ಯಯನ ಮಾಡಿದ್ದರು. ಯಾವುದೋ ಒಂದು ಕಾರಣಕ್ಕೆ ಗುರು ಶಿಷ್ಯರಲ್ಲಿ ಮನಸ್ತಾಪವುಂಟಾಗಿದ್ದರಿಂದ ಯಾಜ್ಞವಲ್ಕ್ಯರು ಆಶ್ರಮವನ್ನು ತ್ಯಜಿಸಿ ಸೂರ್ಯದೇವನನ್ನು ಆರಾಧಿಸಿ ಹೊಸ ಯಜುರ್ವೇದವನ್ನು ಪಡೆದರು. ಅದಕ್ಕೆ ಶುಕ್ಲ ಯಜುರ್ವೇದ ಅಥವಾ ವಾಜಸನೇಯ ಸಂಹಿತಾ ಎಂಬ ಹೆಸರನ್ನು ಕೊಟ್ಟರು. ಸಂಹಿತೆಯಲ್ಲಿ ಅಡಗಿರುವ ಈಶಾವಾಸ್ಯೋಪನಿಷತ್ತು ಅಥವಾ ಬ್ರಾಹ್ಮಣದ ಕೊನೆಯಲ್ಲಿರುವ ಬೃಹದಾರಣ್ಯಕೋಪನಿಷತ್ತು, ಇವು ಜಗನ್ಮಾನ್ಯವಾದ ವೇದಾಂತದ ಮೂಲಗ್ರಂಥಗಳಾಗಿರುತ್ತವೆ.

**ಯಾಜ್ಞವಲ್ಕ್ಯರ ಹುಟ್ಟು** : ಸುನಂದಾದೇವಿ ಗರ್ಭವತಿಯಾಗಿದ್ದಾಗ, ಅವಳ ಪತಿ ದೇವರಾತನು ಮಹಾವಿಷ್ಣುವಿನೊಂದಿಗೆ ಸಂವಾದ ನಡೆಸಿದ ವೇಳೆಗೆ ದೇವತೆಗಳೂ ಪಿತೃಗಳೂ, ಋಷಿಗಳೂ ಅಲ್ಲಿದ್ದರು. ಎಲ್ಲಕ್ಕಿಂತ ಮಿಗಿಲಾಗಿ, ''ಮಹಾವಿಷ್ಣುವಿನ ಆಜ್ಞೆಯಂತೆ ಆಗಮಿಸಿ ವಿನೂತನವಾದ ವೇದಸಂಹಿತೆ ಮತ್ತು ಉಪನಿಷತ್ತನ್ನು ಲೋಕಕ್ಕೆ ನೀಡಲು ಬಂದಿದ್ದೇನೆ'' ಎಂದು ಒಳಗಿದ್ದ ಮಹಾಚೇತನವೇ ನುಡಿಯುತ್ತದೆ, ಹಾಗೂ ಪ್ರಸವದವರೆಗೂ ತಾಯಿ ಜಪಿಸಬೇಕಾದ ವೇದಮಂತ್ರವನ್ನು ಸಹ ತಂದೆಗೆ ತಿಳಿಸುತ್ತದೆ.

ಸುನಂದಾದೇವಿಗೆ ನವಮಾಸಗಳು ತುಂಬಿದ ನಂತರ ಕಾರ್ತೀಕ ಮಾಸದ ಶುಕ್ಲಪಕ್ಷದ ಸಪ್ತಮಿ ದಿನದಂದು ಮಗುವಿನ ಜನನವಾಗುವುದು. ಮಗುವಿನ ನಾಮಕರಣ ನಿಮಿತ್ತ ನಡೆಸಿದ ನವಗ್ರಹ ಹೋಮದಲ್ಲಿ ನವಗ್ರಹ ದೇವತೆಗಳೇ ಸ್ವತಃ ಬಂದು ಹವಿಸ್ಸನ್ನು ಸ್ವೀಕರಿಸುತ್ತಾರೆ. ಯಜ್ಞಕಾರ್ಯವೇ ಪ್ರಧಾನವಾದ ಅಂಶವಾಗಿದ್ದರಿಂದ ಅದರ ಹಿರಿಮೆಯನ್ನು ಸದಾಕಾಲ ನೆನೆಯುತ್ತಿರಲೆಂದು ದೇವರಾತನು ಮಗನಿಗೆ 'ಯಾಜ್ಞವಲ್ಕ್ಯ' ಎಂದು ನಾಮಕರಣ ಮಾಡುತ್ತಾರೆ. ಮುಂದೆ ಬುಡಿಲ ಎಂಬ ಮಹರ್ಷಿಗಳ ನೇತೃತ್ವದಲ್ಲಿ ಚೂಡಾಕರ್ಮ ಅಕ್ಷರಾಭ್ಯಾಸ ನಡೆಯುತ್ತದೆ.



ಆ ಸಂದರ್ಭದಲ್ಲಿ ಆ ಬಾಲಕನ ಸುತ್ತ ಬೆಳಕಿನ ಶಕ್ತಿವ್ಯೂಹ ನಿರ್ಮಾಣವಾಗಿ ಸಾಕ್ಷಾತ್ ಸರಸ್ವತಿದೇವಿಯೇ ಇಡೀ ಶರೀರವನ್ನು ವ್ಯಾಪಿಸುತ್ತಾಳೆ. ಉಪನಯನದ ಸಮಯದಲ್ಲಿ ತಂದೆಯು ಗಾಯತ್ರೀ ಮಂತ್ರವನ್ನು ಉಪದೇಶ ಮಾಡುವಾಗ ಮುಖದಲ್ಲಿ ಅಗ್ನಿಯನ್ನು, ಕಣ್ಣುಗಳಲ್ಲಿ ಆದಿತ್ಯನನ್ನು, ನಾಸಿಕದಲ್ಲಿ ವಾಯುದೇವನನ್ನು ಉದ್ದೀಪನಗೊಳಿಸುತ್ತ, ಆಯಾಯ ಸ್ಥಾನಗಳಲ್ಲಿ ಆಯಾಯ ಸ್ವರೂಪಗಳಲ್ಲಿ ಅವರುಗಳು ಆವಾಹಿತರಾಗುವುದನ್ನು ಋಷಿ ಬುಡಿಲರು ಪ್ರತ್ಯಕ್ಷವಾಗಿ ಕಾಣುತ್ತಾರೆ. ನಂತರ ಯಾಜ್ಞವಲ್ಕ್ಯರು ಗುರುಕುಲಕ್ಕೆ ಸೇರುತ್ತಾರೆ. ಮಹರ್ಷಿ ಭಾಸ್ಕರರಿಂದ ಋಗ್ವೇದವನ್ನೂ, ಜೈಮಿನಿ ಋಷಿಗಳಿಂದ ಸಾಮವೇದವನ್ನೂ, ಅರುಣೀ ಋಷಿಗಳಿಂದ ಅಥರ್ವಣವೇದವನ್ನೂ ಅಧ್ಯಯನ ಮಾಡುತ್ತಾರೆ. ಯಜುರ್ವೇದದ ಅಧ್ಯಯನದ ಮಾರ್ಗದರ್ಶಕರು ಆಚಾರ್ಯ ವೈಶಂಪಾಯನರು. ಇವರು ಶಿಷ್ಯನ ತೀಕ್ಷ್ಣ ಗ್ರಹಣ

ಶಕ್ತಿ, ಉನ್ನತ ಮಟ್ಟದ ಚಿಂತನೆ, ಹಾಗೂ ಅಧ್ಯಯನಶೀಲತೆಯನ್ನು ನೋಡಿ ಬೆರಗಾಗುತ್ತಾರೆ. ಅನಿರೀಕ್ಷಿತ ಅಹಿತ ಘಟನೆ, ಅನಿವಾರ್ಯವಾಗಿ ಗುರು-ಶಿಷ್ಯರನ್ನು ಪ್ರತ್ಯೇಕ ಮಾಡಿತು. ಗುರುವಿನಿಂದ ಕಲಿತ ವಿದ್ಯೆಯನ್ನು ಶಿಷ್ಯರು ಮತ್ತೆ ಗುರುವಿಗೆ ಹಿಂದಿರುಗಿಸುತ್ತಾರೆ. ನಂತರ ಅವರೇ ತಪಸ್ಸು ಮಾಡಿ ಶುಕ್ಲ ಯಜುರ್ವೇದದ ಬೃಹದಾರಣ್ಯಕ ಉಪನಿಷತ್ತನ್ನು ರಚಿಸುತ್ತಾರೆ.

ಒಮ್ಮೆ ಮಿಥಿಲೆಯ ಮಹಾರಾಜ ಜನಕ ಒಂದು ದಕ್ಷಿಣ ಯಾಗವನ್ನು ಆಚರಿಸುವಾಗ ಅಗ್ರಪೂಜೆಯನ್ನು ಒಬ್ಬ ಬ್ರಹ್ಮಜ್ಞಾನಿಗೆ ಸಲ್ಲಿಸಬೇಕೆಂದು ಘೋಷಣೆಯಾಗುತ್ತದೆ ಮತ್ತು ಅಂಥವರು ಸುವರ್ಣ ವರಹಗಳಿಂದ ಅಲಂಕೃತವಾದ ಸಹಸ್ರ ಗೋವುಗಳನ್ನು ದಾನವಾಗಿ ಪಡೆಯಬಹುದೆಂದು ಆಜ್ಞೆ ನೀಡುತ್ತಾರೆ. ಅಲ್ಲಿ ನೆರೆದಿದ್ದ ಮಹಾನ್ ಪಂಡಿತರುಗಳು, ವಿದ್ವಾಂಸರುಗಳು, ಋಷಿಮುನಿಗಳು, ಇದನ್ನು ಕೇಳಿ ತಟಸ್ಥರಾಗುತ್ತಾರೆ. ಆದರೆ ಮಹರ್ಷಿ ಯಾಜ್ಞವಲ್ಕ್ಯರು ಎದ್ದುನಿಂತು ಅವರ ಶಿಷ್ಯರಾದ ನಾಮಶ್ರವನಿಗೆ ಗೋವುಗಳನ್ನು ಆಶ್ರಮಕ್ಕೆ ಕರೆದುಕೊಂಡು ಹೋಗಲು ಆಜ್ಞೆ ಮಾಡುತ್ತಾರೆ. ಮೌನವಾಗಿದ್ದ ಎಲ್ಲ ಋಷಿಗಳೂ ಮೇಲೆ ಎದ್ದು, ''ನೀವು ಬ್ರಹ್ಮಜ್ಞಾನಿಯಾಗಿದ್ದರೆ ನಾವು ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರ ನೀಡಬೇಕು'' ಎಂದು ನುಡಿದರು. ಅವರು ಕೇಳಿದ ಪ್ರಶ್ನೆಗಳಿಗೆ ತಕ್ಕ ಉತ್ತರವನ್ನು ಯಾಜ್ಞವಲ್ಕ್ಯರು ನೀಡಿದರು. ಕಾತ್ಯಾಯಿನಿ ಮತ್ತು ಮೈತ್ರೇಯಿ ಯಾಜ್ಞವಲ್ಕ್ಯರ ಪತ್ನಿಯರು. ಯಾಜ್ಞವಲ್ಕ್ಯರು ಗುರುಕುಲದ ಎಲ್ಲಾ ಕಾರ್ಯಗಳಿಂದ ನಿವೃತ್ತಿ ಹೊಂದ ಬಯಸಿ, ಸಂನ್ಯಾಸ ಸ್ವೀಕರಿಸಲು ನಿರ್ಧರಿಸಿದಾಗ ತಮ್ಮ ಸಂಪತ್ತನ್ನು ತಮ್ಮ ಪತ್ನಿಯರಿಗೆ ಹಂಚಲು ಮುಂದಾದರು. ಕಾತ್ಯಾಯಿನಿ ಅದಕ್ಕೆ ಒಪ್ಪಿದರೂ ಮೈತ್ರೇಯಿ ಒಪ್ಪಲಿಲ್ಲ. ಏಕೆಂದರೆ, ''ಧನ ಸಂಪೂರ್ಣವಾದ ಈ ಪೃಥ್ವಿ ನನಗಿದ್ದರೆ ನಾನು ಅಮೃತಳಾಗುವೆನೆ?'' ಎಂದು ಅವಳು ಪ್ರಶ್ನಿಸಿದಳು. ಅದಕ್ಕೆ ಯಾಜ್ಞವಲ್ಕ್ಯರು ''ಇಲ್ಲ'' ಎನ್ನುತ್ತಾರೆ. **ಅಮೃತತ್ವಸ್ಯ ತು ನಾಶಾಸ್ತಿ ವಿತ್ತೇನ** - ಸಂಪತ್ತಿನಿಂದ ಅಮೃತಳಾಗುವ ಭರವಸೆ ಇಲ್ಲ. ಮೈತ್ರೇಯಿ ದೃಢವಾಗಿ ಹೇಳುತ್ತಾಳೆ, ''ಹಾಗಾದರೆ ಸಂಪತ್ತನ್ನು ತೆಗೆದು ಕೊಂಡು ಏನು ಮಾಡಲಿ?'' ಅದಕ್ಕೆ ಯಾಜ್ಞವಲ್ಕ್ಯರು, ''ನನಗೆ ಪ್ರಿಯಳಾದ ನೀನು ಈಗ ಮತ್ತಷ್ಟು ಪ್ರಿಯಳಾದೆ. ವಾಸ್ತವಿಕವಾಗಿ ನಿನ್ನ ಪ್ರಯೋಜನಕ್ಕಾಗಿ ನೀನು ನನಗೆ ಪ್ರಿಯಳಾಗುವುದಿಲ್ಲ. **ನನಗಾಗಿ** ಹೆಂಡತಿ, ಮಕ್ಕಳು, ಬಂಧುಗಳು ಎಲ್ಲರೂ ಪ್ರಿಯರಾಗುವರು. ಆ **ನಾನು** ಎನ್ನುವ ಮೂಲವೇ ಆತ್ಮ; ಆತ್ಮವನ್ನು ಕಾಣಬೇಕೆಂದರೆ ಕೇಳಬೇಕು, ಮನನ ಮಾಡಬೇಕು, ಅನುಸಂಧಾನ ಮಾಡಬೇಕು. ಆತ್ಮವನ್ನು ಕೇಳಿ, ತಿಳಿದು ಅನುಭವಿಸಿದರೆ ಈ ಎಲ್ಲವೂ ತಿಳಿಯುವುದು'' ಎಂದು ಯಾಜ್ಞವಲ್ಕ್ಯರು ಆತ್ಮಜ್ಞಾನ ವನ್ನು ಸರಳವಾಗಿ ಮೈತ್ರೇಯಿಗೆ ಬೋಧಿಸಿದರು. 'ಹೀಗಲ್ಲ, ಹೀಗಲ್ಲ' ಎಂದೇ (ನೇತಿಮಾರ್ಗ) ಆತ್ಮವನ್ನು ತಿಳಿಯಬೇಕು. ಇದೇ ಅಮೃತತ್ವಕ್ಕೆ ದಾರಿಯಾಗುವುದು. ಮಹರ್ಷಿ ಯಾಜ್ಞವಲ್ಕ್ಯರ ವಾಣಿ ವೇದವಾಯಿತು, ಅವರ ಬದುಕು ಯಜ್ಞವಾಯಿತು.


**ವಿಶ್ವ ವಿಹಾರ್ ಟ್ರಾವೆಲ್ ಆ್ಯಂಡ್ ಟೂರ್ಸ್**

**ವಿದೇಶಿ ಪ್ರವಾಸ ರಿಯಾಯತಿ ದರದಲ್ಲಿ**

**10 ದಿನಗಳ ಜೋರ್ಡಾನ್, ಇಸ್ರೇಲ್ ಮತ್ತು ಈಜಿಪ್ಟ್ ಪ್ರವಾಸ**

**10 ದಿನಗಳ ಚೈನಾ, ಹಾಂಕಾಂಗ್ ಮತ್ತು ಮಕಾವ್ ಪ್ರವಾಸ**

**6 ದಿನಗಳ ಶ್ರೀಲಂಕಾ ಪ್ರವಾಸ**

**7 ದಿನಗಳ ಸಿಂಗಾಪುರ ಮತ್ತು ಮಲೇಶಿಯ ಪ್ರವಾಸ**

**5 ದಿನಗಳ ಬಾಲಿ ಪ್ರವಾಸ**

**11 ದಿನಗಳ ಸಿಂಗಾಪುರ, ಮಲೇಶಿಯ ಮತ್ತು ಥೈಲ್ಯಾಂಡ್ ಪ್ರವಾಸ**

**7 ದಿನಗಳ ಜಪಾನ್ ಪ್ರವಾಸ**

ಪಾಸ್ ಪೋರ್ಟ್ ಮಾಡಿಕೊಡಲಾಗುತ್ತದೆ

**18 ದಿನಗಳ ಯುಕೆ ಮತ್ತು ಯುರೋಪ್ ಪ್ರವಾಸ**

ನಂ. 114, 4ನೇ ಮಹಡಿ, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ಸರ್ಕಲ್, ಬೆಂಗಳೂರು - 560004
ದೂರವಾಣಿ: 080-40916012 • ಮೊಬೈಲ್: 9844166555 • www.vishwavihartours.com